# 15-08-2024









VIKSIT
BHARAT


























ರಂಗ ಮಂಟಪ
VIKSIT
BHARAT

ಸ್ವಾತಂತ್ರ್ಯವೆಂಬುದು ಸುಲಭವಾಗಿ ಸಿಕ್ಕಿದ್ದಲ್ಲ, 190 ವರ್ಷಗಳ ನಿರಂತರ ಹೋರಾಟ, ಹಲವರ ಜೀವ, ಜೀವನ ಕಳೆದುಕೊಂಡು ಗಳಿಸಿಕೊಟ್ಟಂತಹ ಅಪೂರ್ವವಾದ ಸ್ವಾತಂತ್ರ್ಯವಿದು. ಇಂತಹ ಹೋರಾಟಗಾರಿಗೆ ಕೃತಜ್ಞತೆ ತಿಳಿಸುವುದಕ್ಕೆ ಇದೊಂದು ಸುವರ್ಣಾವಕಾಶ ಎಂದು ಮಹಾರಾಣಿ ಕಾಲೇಜಿನ ಇತಿಹಾಸ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಬಿ.ವಿ.ಸುಧಾಮಣಿ ಅವರು ನಗರದ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು, ಶೇಷಾದ್ರಿ ಅಯ್ಯರ್ ರಸ್ತೆ ಆವರಣದಲ್ಲಿ ಆಯೋಜಿಸಿದ್ದ 78ನೇ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ 1885ರಲ್ಲಿ ರಾಷ್ಟ್ರೀಯ ಕಾಂಗ್ರೇಸ್ ಸ್ಥಾಪನೆಯಾದ ನಂತರ ಸ್ವಾತಂತ್ರ್ಯ ಹೋರಾಟದ ದೃಷ್ಟಿಕೋನವೇ ಬದಲಾಯಿತು. 1931ರಲ್ಲಿ ಬೆಂಗಳೂರಿನ ಸುಭಾಷ್ ನಗರದಲ್ಲಿ ನೆಹರು ಧ್ವಜಾರೋಹಣ ನೆರವೇರಿಸಿ ಜವಾಬ್ದಾರಿ ಸರ್ಕಾರ ರಚನೆಗೆ ಸ್ಥಳೀಯ ಜನರ ಸಹಕಾರ ಅಗತ್ಯವೆಂದು ನಾಯಕರಿಗೆ ಮನವರಿಕೆ ಮಾಡಿಕೊಟ್ಟರು. ಇದರಿಂದ ಉತ್ತೇಜಿತರಾದ ಸ್ಥಳೀಯ ನಾಯಕರು ಶ್ರೀಮನ್ ಮಹಾರಾಜರ ಸಹಕಾರದೊಂದಿಗೆ ಜವಾಬ್ದಾರಿ ಸರ್ಕಾರ ರಚನೆಗೆ ಹೋರಾಟ ಆರಂಭಿಸಲು ಸಜ್ಜಾದರು. ಅದರಂತೆ 1938 ಫೆಬ್ರವರಿ 28ರಂದು ಮೈಸೂರಿನಲ್ಲಿಯೂ ಟಿ.ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಕಾಂಗ್ರೇಸ್ ಪಕ್ಷದ ಉದಯವಾಯಿತು. ಇದರ ಭಾಗವಾಗಿ ಮೊದಲ ಅಧಿವೇಶನವನ್ನು ಮೈಸೂರಿನ ಶಿವಪುರದಲ್ಲಿ (ಇಂದಿಗೆ ಮದ್ದೂರು ಜಿಲ್ಲೆ) ಅಧಿವೇಶನ ನಡೆಸಲು ತೀರ್ಮಾನಿಸಿ ಉಸ್ತುವಾರಿಯನ್ನು ಅಂದಿನ ಗುತ್ತಿಗೆದಾರ ತಿರುಮಲೇಗೌಡರಿಗೆ ವಹಿಸಲಾಯಿತು. ಆದರೆ, ಇದನ್ನು ಅಂದಿನ ಜಿಲ್ಲಾ ಮ್ಯಾಜಿಸ್ಟ್ರೇಟ್ ಮೇಖ್ರಿ ಪ್ರತಿಬಂಧಕಾಜ್ಞೆಯ ಅಸ್ತ್ರದ ಮೂಲಕ ತಡೆಯಲು ಪ್ರಯತ್ನಿಸಿದರು. ಆದರೂ ನಿರೀಕ್ಷೆಗು ಮೀರಿ ಭಾಗವಹಿಸಿದ 20000ಕ್ಕೂ ಹೆಚ್ಚು ಜನರ ಸಹಕಾರದಿಂದ ಯಶಸ್ವಿಯಾಗಿ ನೆರವೇರಿತು. ಈ ಘಟನೆಯೇ ಮುಂದೆ ಶಿವಪುರ ಧ್ವಜ ಸತ್ಯಾಗ್ರಹವೆಂದು ಜನಮಾನಸದಲ್ಲಿ ಉಳಿಯಿತು. 1942 ಸೆಪ್ಟೆಂಬರ್ 26ರಂದು ಶಿವಮೊಗ್ಗ ಜಿಲ್ಲೆಯ ಈಸೂರನ್ನು ಪ್ರಥಮ ಸ್ವಾತಂತ್ರ್ಯ ಗ್ರಾಮವೆಂದು ಘೋಷಿಸಲಾಯಿತು ಎಂದು ಇದೇ ವೇಳೆ ತಿಳಿಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಗೌ॥ಕೋಶಾಧ್ಯಕ್ಷ ಶ್ರೀಶೈಲರಾಮಣ್ಣವರ್ ಮಾತನಾಡುತ್ತಾ ದೇಶದ ಭವಿಷ್ಯವನ್ನು ರೂಪಿಸುವಲ್ಲಿ ಯುವ ಜನರ ಪಾತ್ರ ನಿರ್ಣಾಯಕವಾದುದು. ಬ್ರಿಟೀಷರಿಂದ ಐತಿಹಾಸಿಕವಾದ ಸ್ವಾತಂತ್ರ್ಯವನ್ನು ಗಳಿಸಿ 77 ವರ್ಷಗಳು ಗತಿಸಿದ್ದರು ನಾವಿಂದು ಹಲವು ಸವಾಲುಗಳನ್ನು ಎದುರಿಸುತ್ತಿದ್ದೇವೆ. ಸುಮಾರು 3 ದಶಕಗಳಿಗೂ ಹೆಚ್ಚು ಕಾಲ ಭಾರತೀಯರಿಗಾದ ಐತಿಹಾಸಿಕ ಅನ್ಯಾಯದ ದುರಂತವನ್ನು ಯುವ ಜನರಿಗೆ ತಿಳಿಸಿ, ದೇಶದ ಪ್ರಗತಿಗೆ ಕೊಡುಗೆ ನೀಡುವ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಯುವಜನರನ್ನು ಪ್ರೇರೇಪಿಸುವುದು ನಮ್ಮ ಮುಂದಿರುವ ಮೊದಲ ಸವಾಲಾಗಿರುತ್ತದೆ ಮತ್ತು ದೇಶದ ಜ್ವಲಂತ ಸಮಸ್ಯೆಗಳಾದ ಬಡತನ, ಅಸಮಾನತೆ ಮತ್ತು ಸಾಮಾಜಿಕ ತಾರತಮ್ಯದಂತಹ ಸಮಸ್ಯೆಗಳನ್ನು ಪರಿಹರಿಸುವ ಕಾರ್ಯವನ್ನು ಮುಂದುವರೆಸುವುದು ಹಾಗೂ ಭಾರತದಲ್ಲಿರುವ ವೈವಿಧ್ಯಮಯ ಸಮುದಾಯಗಳಲ್ಲಿ ಸಾಮರಸ್ಯ, ಸಹಿಷ್ಣುತೆ ಮತ್ತು ಪರಸ್ಪರ ಗೌರವವನ್ನು ಉತ್ತೇಜಿಸಲು ಪ್ರಾಮುಖ್ಯತೆ ನೀಡುವುದು ಇಂದಿನ ಅಗತ್ಯವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ಆಡಳಿತ ಮಂಡಳಿ ಸದಸ್ಯರಾದ ಶಿವಲಿಂಗಯ್ಯ, ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಕಾನೂನು ಕಾಲೇಜಿನ ಪ್ರಾಂಶುಪಾಲೆ ಡಾ.ದೀಪು, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಸಿದ್ಧಯ್ಯ, ಉಪಪ್ರಾಂಶುಪಾಲ ಸುರೇಶ್, ಅಧ್ಯಾಪಕರು, ಅಧ್ಯಾಪಕೇತರರು, ವಿದ್ಯಾರ್ಥಿಗಳು ಹಾಜರಿದ್ದ ಕಾರ್ಯಕ್ರಮವನ್ನು ಧ್ವಜಾರೋಹಣದ ಮೂಲಕ ಉದ್ಘಾಟಿಸಲಾಯಿತು. ಕಾರ್ಯಕ್ರಮದಲ್ಲಿ ಎಂ.ಪಿ.ಉಷಾ ಮತ್ತು ತಂಡ ಪ್ರಾರ್ಥಿಸಿ, ಸ್ವಾಗತವನ್ನು ಡಾ.ಪಿ.ಗೋವರ್ಧನ್ ಮಾಡಿದರೆ, ನಿರೂಪಣೆ ಕನ್ನಡ ವಿಭಾಗದ ಪುಟ್ಟೇಗೌಡ ಹಾಗೂ ವಂದನಾರ್ಪಣೆ ಕೀರ್ತಿ.ಎಲ್ ನೆರವೇರಿಸಿದರು.